<u>ಶ್ರೀ ರಾಘವೇಂದ್ರ ಕರುಣಾಲಹರೀ</u>

ತ್ವಂಗತ್ತುಂಗ-ತರಂಗ-ಮಂಗಲ-ನದೀ-ತುಂಗಾಂತರಂಗ-ಸ್ಥಲೀ-
ರಂಗೋತ್ಸಂಗ-ನಿಷಂಗಿ-ವಾತ-ವಿಧುತಾಂಭಃ ಪ್ಲಾವಿತೇ ಪಾವಿತೇ ॥
ಶ್ರೀಮಂತ್ರಾಲಯ-ನಾಮ್ನಿ ಧಾಮ್ನಿ ವಸತೇ ಚಾಶಂಸತೇ ಶಂ ಸತೇ
ಮಂತ್ರಾಲೋಚನಮಾರ್ತಿ-ನಾಶನ-ಕೃತೇ ಪುಂಸಾಂ ನಮಸ್ತ್ರನ್ವತೇ ॥೧॥

ತುಂಗಾನದಿಯು ತೇರ್ರೈಸಿ ಬರುವ ಎತ್ತರದ ಉತ್ತುಂಗ ತರಂಗಗಳಿಂದ ಪರಮ ಮಂಗಳಕರವಾಗಿದೆ. ಆ ತುಂಗೆಯ ಅಂತರಂಗ ಸ್ಥಳವು ಒಂದು ರಸರಂಗ. ಆ ತೆರೆಗಳ ಮೇಲೆ ಕುಳಿತ ಗಾಳಿಯು ಆ ನೀರನ್ನು ಚಿಮ್ಮಿ ತೀರವು ಆಪ್ಲಾವಿತವೂ, ಪಾವಿತವೂ, ಪವಿತ್ರತಮವೂ ಆಗಿದೆ. ಇಂಥ ಮಂತ್ರಾಲಯ ಎಂಬ ಹೆಸರಿನ ದಿವ್ಯಧಾಮದಲ್ಲಿ ವಾಸಿಸುವ ರಾಘವೇಂದ್ರ ಸ್ವಾಮಿಗಳು ದೇವತೆಗಳ ಜೊತೆಗೆ ಭಕ್ತರ ದುಃಖ ಹಾಗೂ ದುರಿತಗಳ ಪರಿಹಾರಕ್ಕಾಗಿ ಗುಪ್ತ ಆಲೋಚನೆ(ಮಂತ್ರಾಲೋಚನೆ) ಯನ್ನು ಮಾಡುತ್ತಲಿದ್ದಾರೆ. ಅದಕ್ಕಾಗಿಯೇ ಆ ಸ್ಥಾನಕ್ಕೆ **<u>ಮಂತ್ರಾಲಯ</u>** ಎಂಬ ಸಾರ್ಥಕವಾದ ಹೆಸರು ಬಂದಿದೆ. ಅಲ್ಲಿ ನಿಂತುಕೊಂಡು ಈ ಮಂತ್ರಾಲಯ ಸ್ವಾಮಿಗಳು ಎಲ್ಲರಿಗೂ ಕ್ಷೇಮವನ್ನು ಹಾರೈಸುತ್ತಾರೆ. ಹೀಗೆ ಎಲ್ಲ ಜನರಿಗೂ ಕ್ಷೇಮವನ್ನು ಉಂಟು ಮಡುವ ರಾಘವೇಂದ್ರ ಸ್ವಾಮಿಗಳಿಗೆ ನಮ್ಮ ನಮಸ್ಕಾರ.

ನೋ ಮಂಚಾ ನ ಗೃಹಾ ನ ಚಂಚಲ-ದೃಶೋ ದ್ರವ್ಯಂ ಶ್ರಮಾತ್ಸಂಚಿತಂ
ಚಂಚತ್ ಕಿಂಚನ ಕಿಂಚ ಕಾಂಚನಮಪಿ ತ್ವಾಂ ಚಾನುಯಾಂತ್ಯತ್ಯಯೇ॥
ಸಂಚಿತ್ಯೈವಮಿದಂ ಚ ಮುಂಚ ಸಕಲಂ ಪ್ರಾಪಂಚಿಕಂ ನಶ್ವರಂ
ಮಂಚಾಲೀ-ಗುರುಮಂಚ ಶಾಶ್ವತ-ಸುಖಂ ತ್ವಂ ಚೇತ್ಸಖೇ ವಾಂಛಸಿ॥೨॥

ಮಿತ್ರನೇ, ತುಸು ವಿಚಾರ ಮಾಡು. ಮಂಚಗಳು ನಿನ್ನ ಜೊತೆಗೆ ಮುಂದೆ ಬರಲಾರವು. ನೀನು ಮಾಡಿದ ಅಥವಾ ಕಟ್ಟಿಸಿದ ಮನೆಗಳು ಅಂತ್ಯ ಕಾಲದಲ್ಲಿ ನಿನ್ನ ಜೊತೆಗೆ ಬರಲಾರವು. ಅದರಂತೆ ನಿನ್ನ ಚಿಗರಿಗಂಗಳ ಚೆಲುವೆಯಾದ ಮಡದಿಯೂ ಕೂಡ ಸಂಗಡ ಬಾರಳು. ಕಷ್ಟ ಪಟ್ಟು ನೀನು ಸಂಗ್ರಹಿಸಿದ ದ್ರವ್ಯವೂ ಕೂಡ ನಿನ್ನ ಜೊತೆಗೆ ಬಾರದು, ಮತ್ತು ಹೊಳೆಯುವ ಬಂಗಾರವನ್ನು ನೀನು ಎಷ್ಟೇ ಸಂಪಾದಿಸಿದರೂ ಅದರಲ್ಲಿಯ ಕಿಂಚಿತ್ ಭಾಗವೂ ಕೂಡ ಮರಣ ಕಾಲದಲ್ಲಿ ನಿನ್ನ ಬೆನ್ನು ಹಿಂದೆ ಬರುವದಿಲ್ಲ, ಆದುದರಿಂದ ಹೀಗೆ ವಿಚಾರಿಸಿ ಇದೆಲ್ಲವನ್ನೂ ಬಿಟ್ಟುಬಿಡು. ಈ ಪ್ರಪಂಚದಲ್ಲಿ ಇದ್ದುದೆಲ್ಲವೂ ನಶ್ವರ, ಅಶಾಶ್ವತ. ಆದುದರಿಂದ ಗೆಳೆಯನೇ, ನೀನು ಶಾಶ್ವತವಾದ ಮೋಕ್ಷರೂಪ ಸುಖವನ್ನೇ ಬಯಸುವದಾದರೆ ಮಂಚಾಲೆಯ ಗುರುಗಳಾದ ರಾಘವೇಂದ್ರ ಗುರುಗಳನ್ನು ಭಜಿಸು ಮತ್ತು ಪೂಜಿಸು.

ಇಷ್ಟಾರ್ಥಾಕಲನಾನ್ನೃಣಾಮಿಹ ತಥಾ ಕಷ್ಟಾವಲೇರ್ವಾರಣಾತ್
ಕುಷ್ಠಾಪಸ್ಮೃತಿ-ಪೂರ್ವ-ಭೀಕರ-ರುಜಾ-ದುಷ್ಟ-ಗ್ರಹೋತ್ಸಾರಣಾತ್॥
ಪ್ರೇಷ್ಠೋ ಭಕ್ತತತೇಸ್ತಥಾ ಭಗವತಃ ಪ್ರೇಷ್ಠಶ್ಚ ವಾಯೋರ್ಹರೇಃ
ಶ್ರೇಷ್ಠಃ ಸಂಯಮಿನಾಂ ಕೃಷೀಷ್ಟ ಕರುಣಾಂ
ಶ್ರೀರಾಘವೇಂದ್ರೋ ಗುರುಃ॥೩॥

ಜನರ ಕಷ್ಟಾನಿಷ್ಟಗಳನ್ನು ಪರಿಹಾರ ಮಾಡಿ ಅವರ ಇಷ್ಟಾರ್ಥಗಳನ್ನು ಶ್ರೀ ರಾಘವೇಂದ್ರ ಸ್ವಾಮಿಗಳು ಪ್ರದಾನ ಮಾಡುವರು ಮತ್ತು ಕುಷ್ಠ ಅಪಸ್ಮಾರ ಮುಂತಾದ ಭಯಂಕರ ರೋಗಗಳನ್ನು ನಿವಾರಣ ಮಾಡುವರು, ಮತ್ತು ಶನಿ ಮಂಗಳ ಮೊದಲಾದ ದುಷ್ಟ ಗ್ರಹಗಳ ಬಾಧೆಯನ್ನು ಪರಿಹರಿಸುವರು. ಆದುದರಿಂದಲೇ ಭಕ್ತ ಸಮೂಹಕ್ಕೆಲ್ಲ ಅವರು ಇಷ್ಟತಮರಾಗಿದ್ದಾರೆ. ಭಗವಂತನಾದ ಶ್ರೀ ಹರಿಗೂ ವಾಯುದೇವರಿಗೂ ಅವರು ಅತ್ಯಂತ ಪ್ರೀತ್ಯಾಸ್ಪದರಾಗಿದ್ದಾರೆ. ಇಂಥ, ಮನೋನಿಗ್ರಹ ಮಾಡಿದ ಸಂಯಮೀ ಪುರುಷರಲ್ಲಿ ಅತ್ಯಂತ ಶ್ರೇಷ್ಠರಾದ ಶ್ರೀ ರಾಘವೇಂದ್ರ ಗುರುಗಳು ನನ್ನ ಮೇಲೆ ಕರುಣೆಯನ್ನು ಮಾಡಲಿ.

ಯದ್ವೃಂದಾವನ-ಸಂಪ್ರದಕ್ಷಿಣ-ನಮಸ್ಕಾರಾಽರ್ಚನಾಽರಾಧನೈಃ
ಪಂಗುಸ್ತುಂಗ-ಗಿರೀಂದ್ರ-ಶೃಂಗಮಪಿ ಚೋಲ್ಲಂಘಿತ ಜಂಘಾಲಕಃ॥
ಮೂಕಃ ಸ್ಯಾನ್ಮಧು-ಪಾಕ-ಕಲ್ಪ-ಕವಿತಾ-ವಾಕೋ ವಿವೇಕೋದಯಾದ್
ಜಲ್ಪಾಕಸ್ತ್ರಮಹಂ ಭಜಾಮಿ ಗುರುರಾಟ್-
ಶ್ರೀರಾಘವೇಂದ್ರಂ ಮುನಿಮ್॥೪॥

ರಾಘವೇಂದ್ರ ಸ್ವಾಮಿಗಳ ಮಹಿಮೆ ಅದ್ಭುತವಾಗಿದೆ. ಇವರ ವೃಂದಾವನದ ಪ್ರದಕ್ಷಿಣೆ, ನಮಸ್ಕಾರ, ಅರ್ಚನೆ, ಆರಾಧನೆಗಳನ್ನು ಮಾಡಿದರೆ ಕಾಲಿಲ್ಲದ ಹೆಳವನೂ ಕೂಡ ಜಂಘಾಬಲವನ್ನು ಹೊಂದಿ ಎತ್ತರವಾದ ಪರ್ವತದ ಶೃಂಗವನ್ನೂ ಕೂಡ ಲಂಘಿಸಬಲ್ಲ, ಮೂಕನೂ ಕೂಡ ಜೇನಿನ ರಸಪಾಕದಂತಿರುವ ಮಧುರ ಮಾತಿನ ಮಹಾಕವಿಯಾಗಬಲ್ಲ, ಬಾಯಿಯಿಲ್ಲದ ಆ ಮೂಕ ಒಳ್ಳೇ ವಿವೇಕಿಯಂತೆ ನಿರರ್ಗಳವಾಗಿ ಮಾತನಾಡಬಲ್ಲ, ಇಂಥ ಮಹಾಮುನಿಗಳಾದ ರಾಘವೇಂದ್ರ ಸ್ವಾಮಿಗಳನ್ನು ಭಜಿಸುತ್ತೇನೆ.

ಯಸ್ಯಾಂತಃಕರಣಂ ಪ್ರಪೂರ್ಯ ಕರುಣೋದ್ರಿಕ್ತಾ ಹಿ ರಿಕ್ತಂ ಕರಾ-
ಲಂಕಾರಂ ಚ ಕಮಂಡಲುಂ ಕಲಯತೇ ಪೂರ್ಣಂ ಸದಾರ್ಣೋ-ಮಿಷಾತ್॥
ಶಾಟ್ಯಾಂ ಹೃದ್ಯಮಿತೋದಿತಃ ಪ್ರಕಟಿತೋ ಲೋಕಾನುರಾಗಃ ಪರಃ
ಕಾರುಣ್ಯಾಬ್ಧಿಮಗಣ್ಯ-ಪುಣ್ಯ-ಲಸಿತಂ ಯತ್ಯಗ್ರಗಣ್ಯಂ ಸ್ತುಮಃ॥೫॥

ರಾಘವೇಂದ್ರ ಸ್ವಾಮಿಗಳ ಅಂತಃಕರಣದಲ್ಲಿ ಯಾವಾಗಲೂ ಕರುಣಾ ರಸವು ತುಂಬಿ ತುಳುಕುತ್ತದೆ. ಹೃದಯದಲ್ಲಿ ತುಂಬಿ ಹೊರಸೂಸಿದ ಆ ಕರುಣಾ ರಸವು ಅವರ ಕೈಯ್ಯಲ್ಲಿ ಇರುವ ಕಮಂಡಲವನ್ನು ಜಲರೂಪದಿಂದ ತುಂಬಿರುತ್ತದೆ. ಅದರಂತೆ ಲೋಕಾನುರಾಗವು ಅವರ

ಹೃದಯವನ್ನು ತುಂಬಿ ಹೊರಸೂಸಿದ್ದು ಅವರ ಶಾಟಿಯಲ್ಲಿ ಕೆಂಬಣ್ಣದಿಂದ ಪ್ರಕಟವಾಗಿರುತ್ತದೆ. ಇಂಥ ಅಗಣಿತವಾದ ಪುಣ್ಯದಿಂದ ಹೊಳೆಯುವ ಕರುಣಾ ಸಮುದ್ರರಾದ, ಯತಿಗಳಲ್ಲಿ ಅಗ್ರಗಣ್ಯರಾದ ರಾಘವೇಂದ್ರ ಸ್ವಾಮಿಗಳನ್ನು ಸ್ತೋತ್ರ ಮಾಡುತ್ತೇವೆ.

ಸ್ವರ್ಣ-ಶ್ರೀ-ಮೃಗತೃಷ್ಣಿಕಾಕುಲತಯಾ ಸ್ವಾಂತಂ ನ ತಾಂತಂ ಮನಾಕ್
ಕಾಂತಾ-ಕಾಮನಯಾ ಕದಾಚಿದಪಿ ನ ಭ್ರಾಂತಂ ಚ ಕಾಂತಾರಕೇ॥
ವೈ ದೇಹೀ ನ ಚ ಕಾಽಪಿ ಕೋಽಪಿ ಭವತಾ ದೂರೀಕೃತಾಽನಾದೃತೋಽ
ಥಾಪಿ ತ್ವಂ ನನು ರಾಘವೇಂದ್ರ-ಪದ-ಭಾಕ್ ಕಸ್ಮಾನ್ನ ವಿಸ್ಮೀಯತೇ॥೬॥

ರಾಘವೇಂದ್ರ ಸ್ವಾಮಿಗಳೇ, ನಿಮಗೆ ರಾಘವೇಂದ್ರ ಎಂದು ಹೆಸರು ಇದೆ. ರಾಘವ+ಇಂದ್ರ ರಘುಕುಲ ಶ್ರೇಷ್ಠ ಶ್ರೀ ರಾಮ ಎಂದು ಇದರರ್ಥ. ನಿಮಗೆ ಆ ಶ್ರೀ ರಾಮನ ಶ್ರೀ ರಾಘವೇಂದ್ರ ಎಂಬ ಹೆಸರು ಇದ್ದದ್ದು ಅತ್ಯಂತ ಆಶ್ಚರ್ಯಕರ. ಏಕೆಂದರೆ ಆ ರಾಮನ ಒಂದು ಧರ್ಮವೂ ನಿಮ್ಮಲ್ಲಿ ಇಲ್ಲ. ಆ ಶ್ರೀ ರಾಮನು ಬಂಗಾರದ ಚಿಗರೆಯ ಬೆನ್ನು ಹತ್ತಿ ವ್ಯಾಕುಲಗೊಂಡಿದ್ದ. ಆದರೆ ನೀವು ಮಾತ್ರ ಆ ಬಂಗಾರ ಐಶ್ವರ್ಯ ಎಂಬ ಮೃಗ ಮರೀಚಿಕೆಯ ಬೆನ್ನು ಹತ್ತಿ ಎಂದೂ ಮನಸ್ಸಿನಲ್ಲಿ ವ್ಯಾಕುಲಗೊಂಡಿಲ್ಲ. ಆ ಶ್ರೀ ರಾಮನು ತನ್ನ ಕಾಂತೆಯ ಕಾಮನೆಯಿಂದ ಅಡಿವೆಯ ತುಂಬ ತಿರುಗಾಡಿದ. ಆದರೆ ನೀವು ಮಾತ್ರ ಅಂಥ ಸ್ತ್ರೀ ಕಾಮನೆ ಅಥವಾ ಕಾಂತಾ ಕಾಮನೆಯಿಂದ ಎಂದೂ ಕಾಡಿನಲ್ಲಿ ಅಥವಾ ನಾಡಿನಲ್ಲಿ ತಿರುಗಾಡಿಲ್ಲ. ಆ ರಾಮನು ವೈದೇಹಿ ಅಂದರೆ ಸೀತೆಯನ್ನು ಮನೆ ಬಿಟ್ಟು ಹೊರಗೆ ಅಟ್ಟಿ ಅನಾದರ ತೋರಿಸಿದ. ಆದರೆ ನೀವು ಮಾತ್ರ ದೇಹಿ, ಎಂದರೆ ಕೊಡಿರಿ ಎಂದು ಕೇಳಿದ ಯಾವದೇ (ವೈ)ದೇಹಿಯನ್ನು ಎಂದರೆ ದೇಹವುಳ್ಳ ಮಾನವನನ್ನು ಅನಾದರಿಸಲಿಲ್ಲ. ದೂರೀಕರಿಸಲಿಲ್ಲ. ಆದರೂ ನೀವು ರಾಮನ "ರಾಘವೇಂದ್ರ" ಎಂಬ ಹೆಸರನ್ನು ಹೊಂದಿದ್ದೀರಿ. ಅಂದ ಮೇಲೆ ಜನರಿಗೆ ಏಕೆ ಆಶ್ಚರ್ಯವಾಗ ಬೇಡ!

ಹಿಂದಿನ ಪದ್ಯದಲ್ಲಿ ರಾಘವೇಂದ್ರ ಸ್ವಾಮಿಗಳಿಗೆ ಶ್ರೀ ರಾಮನ ‘ರಾಘವೇಂದ್ರ’ ಎಂಬ ಹೆಸರು ಹೊಂದುವದಿಲ್ಲ ಎಂದು ಆಲಂಕಾರಿಕವಾಗಿ ಶ್ಲೇಷಾರ್ಥದಿಂದ ಹೇಳಿದ್ದರೂ ಈಗ ಶ್ರೀ ರಾಮಚಂದ್ರನ ವಿಶಿಷ್ಟ ಗುಣಗಳು ಇವರಲ್ಲಿ ಇದ್ದುದರಿಂದ ಇವರಿಗೆ ಶ್ರೀ ರಾಮನ ‘ರಾಘವೇಂದ್ರ’ ಎಂಬ ಹೆಸರು ಸಾರ್ಥಕವೂ ಅನ್ವರ್ಥಕವೂ ಆಗಿದೆ ಎಂದು ಸಾಧಿಸಲಾಗುತ್ತದೆ.

ಮುಖ್ಯಪ್ರಾಣ-ನಿವಿಷ್ಟ-ಚೇತನತಯಾ ರಾಮಾನುರಾಗೇಣ ಚ
ಕಾಂತ್ಯಾ ಭಾಸುರ-ಲಕ್ಷ್ಮಣಾನ್ವಿತತಯಾ ಸ್ನೇಹಾತ್ ಸುಮಿತ್ರಾದರಾತ್॥
ಭಾಸ್ವದ್-ಭಾರತ-ಭಾಗ್ಯ-ವರ್ಧನಕೃತೇ ಸರ್ವಸ್ವ-ದಾನಾದಪಿ
ಸ್ವಾಮಿಂಸ್ತ್ರೇ ಖಲು 'ರಾಘವೇಂದ್ರ' ಇತಿ-ಯನ್ನಾಮೈತದನ್ವರ್ಥಕಮ್॥೭॥

ಶ್ರೀ ರಾಮನ ಮುಖ್ಯ ಗುಣವೆಂದರೆ ಮುಖ್ಯ ಪ್ರಾಣನಾದ ಹಣಮಂತನಲ್ಲಿ ಅತ್ಯಂತ ಪ್ರೀತಿಯಿಂದ ಯುಕ್ತನಾಗಿರುವದು. ಅದರಂತೆ ನೀವಾದರೂ ಆ ಹಣಮಂತನ ಅವತಾರಭೂತರಾದ ಗುರುಮಧ್ವರಲ್ಲಿ ಸರ್ವದಾ ಆವಿಷ್ಟ ಮನಸ್ಕರಾಗಿದ್ದೀರಿ. ಆ ಶ್ರೀ ರಾಮನು 'ರಾಮಾ' ಎಂದರೆ ತನ್ನ ಮಡದಿಯಾದ ಸೀತೆಯಲ್ಲಿ ಪ್ರೀತಿ ಮಾಡುತ್ತಿದ್ದನು. ನೀವು ಸಾಕ್ಷಾತ್ ಆ ಶ್ರೀ ರಾಮನಲ್ಲಿಯೇ ಭಕ್ತಿರೂಪ ಅನುರಾಗ ಮಾಡುತ್ತಿದ್ದೀರಿ. ಆ ರಾಮನು ಕಾಂತಿಯಿಂದ ಹೊಳೆಯುವ ಲಕ್ಷ್ಮಣನಿಂದ ಒಡಗೂಡಿದ್ದನು. ನೀವು ಒಳ್ಳೆಯ ಕಾಂತಿಯಿಂದ ಹೊಳೆಯುವ ಒಳ್ಳೆಯ ಲಕ್ಷಣಗಳಿಂದ ಒಡಗೂಡಿದ್ದೀರಿ. ಆ ರಾಮನು ಅತ್ಯಂತ ಸ್ನೇಹದಿಂದ ‘ಸುಮಿತ್ರಾ’ ಎಂಬ ತನ್ನ ಚಿಕ್ಕತಾಯಿಯಲ್ಲಿ ಪ್ರೀತ್ಯಾದರ ಉಳ್ಳವನಾಗಿದ್ದನು. ಅದರಂತೆ ನೀವು ಕೂಡ ಒಳ್ಳೆಯ ಮಿತ್ರರಲ್ಲಿ ಸ್ನೇಹಾದರ ಉಳ್ಳವರಾಗಿದ್ದೀರಿ. ಆ ಶ್ರೀ ರಾಮನು ತನ್ನ ತಮ್ಮನಾದ ಭರತನ ಭಾಗ್ಯವನ್ನು ವರ್ಧಿಸುವುದಕ್ಕಾಗಿ ತನ್ನ ಸರ್ವಸ್ವವನ್ನೂ ಕೊಟ್ಟನು. ಅದರಂತೆ ತಾವಾದರೂ ಭಾರತ ದೇಶದ ಭಾಗ್ಯ ವೃದ್ಧಿಗಾಗಿ ತಮ್ಮ ಪುಣ್ಯ ಸರ್ವಸ್ವವನ್ನೊ ಧಾರೆಯೆರೆದಿರುವಿರಿ. ಆದುದರಿಂದ ಸ್ವಾಮಿಗಳೇ, ನಿಮಗೆ ಗುರುಗಳು ಕೊಟ್ಟ ರಾಮನ ‘ರಾಘವೇಂದ್ರ’ ಎಂಬ ಹೆಸರು ಅನ್ವರ್ಥಕವಾಗಿರುತ್ತದೆ.

ಸ್ಫೀತೇ ಚೂತ-ರಸೇ ಪ್ರಮಾದ-ಪತಿತಃ ಪೋತಃ ಪರೇತಃ ಕೃಪಾ-
ದೃಕ್ಪಾತೇನ ತವಾತಿ-ಶೀತಲಹೃದೋ ಜಾತಃ ಪುನರ್ಜೀವಿತಃ॥
ಸಂಸಾರೇ ವಿಷಯಾಖ್ಯ-ಕಶ್ಮಲ-ರಸೇ ಪನ್ನೋಽವಸನ್ನೋಽಸ್ಮ್ಯಹಂ
ಕಿಂ ನೋತ್ಥಾಪಯಸೇ ಗುರೋ ತವ ಪುರಃ-ಖಿನ್ನಂ ವಿಷಣ್ಣಂ ಚ ಮಾಮ್॥೮॥

ಗುರುರಾಘವೇಂದ್ರರೇ, ಗಟ್ಟಿಯಾದ ಮಾವಿನ ಹಣ್ಣಿನ ಶೀಕರಣೀ ರಸದಲ್ಲಿ ಪ್ರಮಾದದಿಂದ ಬಿದ್ದ ಮಗು ಸತ್ತು ಹೋಗಿತ್ತು. ತಣ್ಣಗಿನ ಹೃದಯದವರಾದ ತಮ್ಮ ಕೃಪಾದೃಷ್ಟಿಯು ಬಿದ್ದ ಕೂಡಲೇ ಆ ಮಗುವು ಬದುಕಿ ಪುನರ್ಜೀವಿತವಾಯಿತು. ಆದರೆ ಈ ಸಂಸಾರದಲ್ಲಿ ವಿಷಯಗಳೆಂಬ ದೂಷಿತವಾದ ರಸದಲ್ಲಿ ನಾನು ಬಿದ್ದಿದ್ದೇನೆ, ನಾಶ ಹೊಂದುತ್ತಿದ್ದೇನೆ. ನಿಮ್ಮ ಕಣ್ಣೆದುರೇ ಬಿದ್ದು ಖಿನ್ನನೂ ವಿಷಣ್ಣನೂ ಆದ ನನ್ನನ್ನು ನೀವು ಏಕೆ ಎಬ್ಬಿಸಲೊಲ್ಲಿರಿ.

ಅರ್ಥಿ-ಪ್ರಾರ್ಥಿತದಾಪಿ ದಿವ್ಯಸುರಭಿರ್ನೂನಂ-ಪಶುತ್ವಾಂಚಿತಾ
ಸೋಽಯಂ ಕಲ್ಪ-ಮಹೀರುಹೋಽಪಿ ಜಡತಾಪನ್ನೋ ಹಿ ಮಾನ್ಯೋ ದಿವಿ॥
ಹಂತಾಶ್ಮೈವ ಸ ಚಿಂತಿತೇಷ್ಟ-ಫಲದಶ್ಚಿಂತಾ-ಮಣಿಶ್ಚಾಂತತಃ
ತತ್ಕೇನೋಪಮಿನೋಮಿ ತಂ ಗುರುಮತೋ ಖಿನ್ನಾಽವಸನ್ನಾ ಚ ವಾಕ್॥೯॥

ಸ್ವರ್ಗ ಲೋಕದಲ್ಲಿರುವ ಕಾಮಧೇನುವು ಬಯಸಿದ್ದನ್ನೆಲ್ಲ ನೀಡುತ್ತದೆ. ಏನಾದರೂ ಅದು ಪಶುವೇ ಅಷ್ಟೇ? ಸ್ವರ್ಗದಲ್ಲಿ ಅತ್ಯಂತ ಮಾನ್ಯವಾದ ಕಲ್ಪವೃಕ್ಷವೂ ಕೂಡ ಜಡವೇ ತಾನೇ? ಮನಸ್ಸಿನಲ್ಲಿ ಮಾಡಿದ್ದೆಲ್ಲವನ್ನೂ ನೀಡುವ ಚಿಂತಿತಾರ್ಥ ಪ್ರದವಾದ ಆ

ಚಿಂತಾಮಣಿ ಎಂಬ ರತ್ನವೂ ಕೂಡ ಕೇವಲ ಒಂದು ಕಲ್ಲೇ ಆಗಿರುತ್ತದೆ. ಆದುದರಿಂದ ಗುರುಗಳೇ, ನಿಮ್ಮನ್ನು ಯಾರಿಗೆಂದು ಹೋಲಿಸಲಿ? ಆದುದರಿಂದ ಖಿನ್ನನಾದ ನನ್ನ ವಾಣಿಯು ಕ್ಷೀಣವಾಗಿದೆ ಮತ್ತು ನಿಸ್ಸತ್ವವೂ ಆಗಿದೆ.

ಯತ್ಪಾದಾಂಬುಜ-ಸೇವನಾತ್ಸುತವತೀ ವಂಧ್ಯಾಽಭಿನಂದ್ಯಾ ಭವೇತ್
ಕಾಣಃ ಕ್ಷೀಣ-ಸುದೃಕ್ ಕ್ಷಣಾನ್ನಲಿನ-ದೃಕ್ ಚಕ್ಷುಷ್ಮತಾಮಗ್ರಣೀಃ॥
ಕೌಬೇರೀಂ ಶ್ರಿಯಮಾಪ್ನುಯಾದಪಿ ದರಿದ್ರಾಣೋ ಜುಷಾಣೋಽಂಜಲಿಮ್
ಹೀನೋಽಹೀನ-ಶಯಾನ-ದೇವ-ಶರಣಂ ಶ್ರೀರಾಘವೇಂದ್ರಂ ಸ್ತುಮಃ॥೧೦॥

ಶ್ರೀ ರಾಘವೇಂದ್ರ ಸ್ವಾಮಿಗಳ ಪಾದ ಕಮಲಗಳ ಸೇವೆಯಿಂದ ಬಂಜೆಯು ಪುತ್ರವತಿಯಾಗುವಳು ಮತ್ತು ಅಭಿನಂದನೀಯಳೂ ಆಗುವಳು, ಮತ್ತು ಕಣ್ಣಿನ ದೃಷ್ಟಿಪಾಟವವೂ ಕ್ಷೀಣಿಸಿ ಕುರುಡನಂತಾದ ಮಾನವನೂ ಕೂಡ ಇವರ ಪಾದ ಸೇವನೆಯಿಂದ ಒಂದು ಕ್ಷಣದಲ್ಲಿ ಕಮಲಾಕ್ಷನಾಗುವನು ಮತ್ತು ಕಣ್ಣುಳ್ಳವರಲ್ಲಿ ಶ್ರೇಷ್ಠನಾದ ಚಕ್ಷುಷ್ಮಾನ್ ಪುರುಷ ಎನಿಸುವನು. ಮತ್ತು ದಟ್ಟ ದರಿದ್ರನಾದ ಹೀನ ಮಾನವನು ನಿಮಗೆ ಕೈ ಮುಗಿದು ಸೇವೆ ಮಾಡಿದರೆ ಕುಬೇರನಂಥ ಐಶ್ವರ್ಯ ಹೊಂದುತ್ತಾನೆ. ಶೇಷಶಾಯಿಯಾದ ಶ್ರೀ ಹರಿಯನ್ನು ಶರಣು ಹೊಂದಿದ ಶ್ರೀ ರಾಘವೇಂದ್ರ ಗುರುಗಳನ್ನು ಸ್ತೋತ್ರ ಮಾಡುತ್ತೇನೆ.

ಯನ್ನಾಮ-ಸ್ಮರಣಂ ತ್ರಿತಾಪ-ಹರಣಂ ಸೌಖ್ಯಾವಲೇಃ ಕಾರಣಂ
ಯಸ್ಯಾಂಘ್ರ್ಯೋರ್ನಮನಂ ವಿಪತ್ಪ್ರಶಮನಂ ಧ್ಯಾನಂ ನಿದಾನಂ ಮುದಾಮ್॥
ಯತ್ಪಾದಾಶ್ರಯಣಂ ಶ್ರಿಯೋ ವಿತನುತೇ ಶಶ್ವಚ್ಚ ವಿಶ್ರಾಣನಂ
ಯದ್ವೃಂದಾವನ-ದರ್ಶನಂ ಭಜ ಗುರುಂ ಸರ್ವಾಪದಾಂ ಕರ್ಶನಮ್॥೧೧॥

ಯಾವ ರಾಘವೇಂದ್ರ ಸ್ವಾಮಿಗಳ ನಾಮ ಸ್ಮರಣದಿಂದ ಮಾನವರ ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ಎಂಬ ಮೂರೂ ವಿಧವಾದ ತಾಪಗಳ ಪರಿಹಾರವಾಗುತ್ತದೆ. ಮತ್ತು ಸೌಖ್ಯ ಪರಂಪರೆಗೂ ಅದು ಕಾರಣವಾಗುತ್ತದೆ ಮತ್ತು ಇವರ ಎರಡು ಪಾದಗಳ ನಮಸ್ಕಾರವು ಕುತ್ತು-ವಿಪತ್ತುಗಳನ್ನು ಶಮನಗೊಳಿಸುವದು ಮತ್ತು ಇವರ ಧ್ಯಾನವು ಸಂತೋಷಕ್ಕೆ ಹೇತುವಾಗುವುದು ಹಾಗೂ ಇವರ ಪಾದದ ಆಶ್ರಯವು ನಿರಂತರವಾದ ಸಂಪತ್ತನ್ನು ಪ್ರದಾನ ಮಾಡುವುದು ಹಾಗೂ ಇವರ ವೃಂದಾವನದ ದರ್ಶನದಿಂದ ಸಕಲ ವಿಧವಾದ ಕುತ್ತು-ಆಪತ್ತುಗಳು ಪರಿಹಾರವಗುವವು. ಅಂಥ ಗುರುಗಳಾದ ಶ್ರೀ ರಾಘವೇಂದ್ರ ಸ್ವಾಮಿಗಳ ಭಜನೆಯನ್ನು ಮಾನವ ನೀನು ಮೊದಲು ಮಾಡು.

ವೆಂಕಣ್ಣಸ್ಯ ನಿರಕ್ಷರಸ್ಯ ಚ ಗವಾಂ ಪಾಲಸ್ಯ ಲೋಲದ್ವಚೋಃ
ನ್ಯಸ್ತೇ ಹಸ್ತ-ತಲೇಽಸ್ಯ ಮಸ್ತಕ-ತಟೇ ಧ್ವಸ್ತಾಸ್ಸಮಸ್ತಾಪದಃ॥
ಕಾಲೇ ಸ್ಫೂರ್ತಿ-ವಿಶೇಷತಃ ಸಮಭವದ್ ಜ್ಞಾನೋದಯಸ್ತತ್ಕ್ಷಣಾತ್
ಯಸ್ಯೋದ್ಯದ್ದಯಯಾ ಶ್ರಿಯಸ್ಸಮುದಯೋ
ಭಾಗ್ಯೋದಯಸ್ತಂ ಭಜೇ॥೧೨॥

ವೆಂಕಣ್ಣ ಎಂಬ ಬಾಲಕನು ದಡ್ಡ, ನಿರಕ್ಷರಕುಕ್ಷಿ. ಅವನೊಬ್ಬ ದನಕಾಯುವವನು. ಚಂಚಲ ಹುಡುಗ. ಅವನ ತಲೆಯ ಮೇಲೆ ಗುರುರಾಘವೇಂದ್ರರು ಕೈ ಇಟ್ಟರು. ಅದರಿಂದ ತಕ್ಷಣದಲ್ಲಿಯೇ ಅವನ ಆಪತ್ತುಗಳೆಲ್ಲವೂ ಪರಿಹಾರವಾದವು. ಅವನಿಗೆ ಆಪತ್ಕಾಲದಲ್ಲಿ ರಾಯರ ದಯದಿಂದ ಸ್ಫೂರ್ತಿ ಉದಯವಾಯಿತು, ವಿಶೇಷವಾಗಿ ಜ್ಞಾನಸ್ಫುರಣವಾಯಿತು. ಶ್ರೀ ರಾಘವೇಂದ್ರ ಸ್ವಾಮಿಗಳ ದಯೆಯಿಂದ ಆ ವೆಂಕಣ್ಣನಿಗೆ ಭಾಗ್ಯೋದಯವಾಗಿ ಐಶ್ವರ್ಯದ ಅಭ್ಯುದಯವೂ ಆಯಿತು. ಅಂಥ ರಾಘವೇಂದ್ರ ಸ್ವಾಮಿಗಳನ್ನು ನಾನು ಭಜಿಸುತ್ತೇನೆ.

ನೋ ಸಂಧ್ಯಾಚರಣಂ, ಜಪಾದಿ-ಕರಣಂ, ನೋ ನಾಮ್ನ ಉಚ್ಚಾರಣಂ
ಕ್ಷೇತ್ರೇ ಸಂಚರಣಂ, ಪುರಶ್ಚರಣತೋನಾಕಾರ್ಷ್ಮವಿಷ್ಣುಸ್ತವಮ್॥
ತನ್ನೋಽದ್ಯೋದ್ಧರಣಂ ಕಥಂ ನ್ವಿತಿ ಗುರೋ ಸರ್ವಾಪದುತ್ತಾರಣಂ
ಯಾತಾಸ್ತೇ ಚರಣಂ ಭಿಯಾದ್ಯ ಶರಣಂ ಮಾ ನಃ ಕೃಥಾ ವಾರಣಮ್॥೧೩॥

ನಾವು ಈ ವರೆಗೂ ಸರಿಯಾಗಿ ಸಂಧ್ಯಾವಂದನೆಯ ಆಚರಣವನ್ನೂ ಮಾಡಲಿಲ್ಲ, ಮಂತ್ರ ಜಪವನ್ನೂ ಮಾಡಲಿಲ್ಲ, ಭಗವಂತನ ನಾಮ ಸ್ಮರಣೆಯನ್ನೂ ಗೈಯ್ಯಲಿಲ್ಲ, ತೀರ್ಥ ಕ್ಷೇತ್ರಗಳ ಸಂಚಾರವನ್ನೂ ಮಾಡಲಿಲ್ಲ ಮತ್ತು ವಿಷ್ಣುವಿನ ಮಂತ್ರ ಸ್ತೋತ್ರಗಳ ಪುರಶ್ಚರಣಾದಿಗಳನ್ನೂ ಮಾಡಲಿಲ್ಲ ಅಂದ ಬಳಿಕ ನಮ್ಮ ಉದ್ಧಾರವು ಆಗುವುದು ಹೇಗೆ ಎಂಬ ಚಿಂತೆಯಿಂದ ಆಕ್ರಾಂತರಾದ ನಾವು ಗುರು ರಾಘವೇಂದ್ರರೇ ಎಲ್ಲ ಆಪತ್ತುಗಳಿಂದ ಪಾರು ಮಾಡುವ ನಿಮ್ಮ ಚರಣಕ್ಕೆ ಶರಣು ಬಂದಿದ್ದೇವೆ. ಆದುದರಿಂದ ಭವದ ಭಯದಿಂದ ಹೆದರಿ ಶರಣು ಬಂದ ನಮ್ಮನ್ನು ನಿವಾರಣ ಮಾಡಿ ದೂರೀಕರಿಸದಿರಿ.

ಸ್ವಾಮಿನ್ ನೈಕ-ಜನುಸ್ಸಮರ್ಜಿತ-ಮಹಾ-ಪಾಪಾವಲೀ ಪರ್ವತಾ-
ಕಾರಾ ಭೀರುಮಮುಂಚ ಭೀಷಯತಿ ಮಾಂ ಕಾ ಭೀರ್ವದಾಭೀಕ ತೇ॥
ಹೈಮಂತಂ ಹಿ ಹಿಮಂ ಪ್ರಕಂಪಯತು ವಾ ಕಾಮಂ ತು ಭೌಮಂ ಜನಂ
ಕಚ್ಚಿಚ್ಚಂಡರುಚೋ ನು ಗಂಡಮಧರಂ ಶೈತ್ಯೇನ ಕಿಂ ಖಂಡಯೇತ್॥೧೪॥

ಸ್ವಾಮಿ ರಾಘವೇಂದ್ರ ತೀರ್ಥರೇ, ನಾನು ನನ್ನ ಹಿಂದಿನ ಅನೇಕ ಜನ್ಮಗಳಲ್ಲಿ ಮಾಡಿದ ಪಾಪ ಸಂಚಯವು ಪರ್ವತಾಕಾರವಾಗಿ ಬೆಳೆದು ಬಿದ್ದಿದೆ. ಮೊದಲೇ ಅಂಜುಬುರುಕನಾದ ನನ್ನನ್ನು ಅದು ಗಾಬರಿಗೊಳಿಸುತ್ತದೆ. ನಿಮಗೇನು ಹೆದರಿಕೆ ಹೇಳಿರಿ. ನೀವು ಅಭೀಕ ಅಂದರೆ ಯಾವುದೇ ತರಹದ ಭಯ ಇಲ್ಲದಿರುವವರು ನಿಮಗೇನು ಹೆದರಿಕೆ? ಹೇಮಂತ ಋತುವಿನ ಹಿಮವು ಭೂಲೋಕದ ಜನರನ್ನು ಬೇಕಾದಷ್ಟು ನಡುಗಿಸಲಿ ಆದರೆ ಆ ಹಿಮವು ಎಂದಾದರೂ ತನ್ನ ಶೈತ್ಯದಿಂದ ಸೂರ್ಯನ ಗಲ್ಲವನ್ನು, ಅಧರವನ್ನು ಕಡಿಯಲು ಸಮರ್ಥವಾದೀತೆ?

ವ್ಯಾಖ್ಯಾ ಯೇನ ಕೃತಾ ಸುಧಾ-ಪರಿಮಳಾಭಿಖ್ಯಾ ಹಿ ಸಂಖ್ಯಾವತಾ
ಶ್ರೀಮನ್ ನ್ಯಾಯಸುಧಾಕೃತೇಃ ಪರಿಮಳವ್ಯಾಖ್ಯಾಚಯನ್ನಿರ್ಮಿತಾ
ಮಧ್ವವ್ಯಾಸಜಯಾರ್ಯ ಭಾವಮಣಿಸನ್ಮಂಜೂಷಿಕೋದ್ಘಾಟಿನೀ
ಮಾನ್ಯಾ ಮಾಧ್ವ ಗುರೋರ್ಜಯಾಭಿಧಮುನೇಃ
ಪೂರ್ಣಾಶಯೋದ್ಭಾಸಿನೀ॥
ವ್ಯಾಸಾರ್ಯಸ್ಯ ಹಿ ಚಂದ್ರಿಕಾ ಚ ಖಲು ಯದ್ ವ್ಯಾಖ್ಯಾನತಃ ಖ್ಯಾತಿಭಾಕ್
ವಿದ್ವತ್ಪ್ರಖ್ಯ ಯತಿ ಪ್ರಮುಖ್ಯ ಗುರುರಾಟ್ ನಃ ಸೌಖ್ಯದೋಽಸ್ತ್ವನ್ವಹಮ್॥೧೫॥

ಮಹಾ ಪಂಡಿತರಾದ ರಾಘವೇಂದ್ರ ಸ್ವಾಮಿಗಳು ಮಾಧ್ವ ಸಮಾಜದ ಗುರುಗಳಾದ ಜಯತೀರ್ಥ ಎಂಬ ಮಹಾಮುನಿಗಳ ಸಂಪೂರ್ಣ ಅಭಿಪ್ರಾಯವನ್ನು ಪ್ರಕಟ ಪಡಿಸುವ ಸರ್ವಮಾನ್ಯವಾದ ಪರಿಮಳ ಎಂಬ ಹೆಸರಿನ ಸುಧಾ ಗ್ರಂಥದ ವ್ಯಾಖ್ಯಾನವನ್ನು ರಚಿಸಿದರು. ಅದು ಶ್ರೀ ವೇದವ್ಯಾಸರು ಮಧ್ವಾಚಾರ್ಯರು ಮತ್ತು ಜಯತೀರ್ಥರು ಈ ಮೂವರ ಗೂಢ ಭಾವನೆಗಳೆಂಬ ರತ್ನಸಂಪುಟಗಳ ಮುಚ್ಚಳವನ್ನು ತೆಗೆಯುವ ಶ್ರೇಷ್ಠ ಕೃತಿಯಾಗಿದೆ. ಹಾಗೂ ವ್ಯಾಸತೀರ್ಥರ ಚಂದ್ರಿಕಾ ಎಂಬ ಗ್ರಂಥಕ್ಕೂ ಶ್ರೀ ರಾಘವೇಂದ್ರ ಸ್ವಾಮಿಗಳು ಪ್ರಕಾಶ ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ಆ ವ್ಯಾಖ್ಯಾನವೂ ಅದನ್ನು ಬರೆದ ರಾಘವೇಂದ್ರ ತೀರ್ಥರೂ ಜಗತ್ತಿನಲ್ಲಿ ಪ್ರಖ್ಯಾತರಾಗಿದ್ದಾರೆ. ಇಂಥ ವಿದ್ವಾಂಸರಲ್ಲಿ ಶ್ರೇಷ್ಠರಾದ ಸನ್ಯಾಸಿಗಳಲ್ಲಿ ಅತ್ಯಂತ ಮುಖ್ಯರಾದ ಗುರುರಾಜರು ನಮಗೆ ಯಾವಾಗಲೂ ಸೌಖ್ಯವನ್ನು ನೀಡಲಿ.

ಪ್ರತ್ಯೂಹ ವ್ಯೂಹ ತುಂಗ ಕ್ಷಿತಿಧರ ದಲನಾತ್ಯುಗ್ರದಂಭೋಲಿ ಲೀಲಾ-
ರಂಭೋಜ್ಜೃಂಭತ್-ಕಟಾಕ್ಷೇಕ್ಷಣ-ಜನಿತ-ಜಗತ್ಕ್ಷೇಮ ಭೂಮಾಭಿರಾಮಮ್
ಶ್ರೀಮದ್ರಾಮಾಂಘ್ರಿ-ಭಕ್ತ್ಯೇತರ-ವಿಷಯ-ವಿರಕ್ತ್ರೀಶ-ಸುಜ್ಞಾನ-ಪುಷ್ಪ-
ಸ್ತೋಮಾಽರಾಮಾಯಿತಾಂತಃಕರಣ-ಗುರುಮಮುಂ
ಚೈಮಿ ಭಕ್ತ್ಯಾರಣಂ ತಮ್ ॥೧೬॥

ಮಾನವರಿಗೆ ಬರುವ ವಿಘ್ನಗಳ ಜಾಲವು ಒಂದು ಎತ್ತರವಾದ ಪರ್ವತದಂತಿದೆ. ಅದನ್ನು ವಜ್ರಾಯುಧದಂತೆ ಲೀಲಾಜಾಲವಾಗಿ ಗುರುಗಳ ಕಟಾಕ್ಷವು ಈ ಕ್ಷಣ ಮಾತ್ರದಲ್ಲಿಯೇ ನಾಶ ಮಾಡಿ ಜಗತ್ತಿಗೆ ಕ್ಷೇಮಾರಾಮವನ್ನು ಉಂಟು ಮಾಡುತ್ತದೆ. ಗುರುಗಳ ಅಂತಃಕರಣವು ಒಂದು ಉಪವನದಂತಿದೆ. ಅದರಲ್ಲಿ ಶ್ರೀ ರಾಮನ ಪಾದ ಭಕ್ತಿ ಹಾಗೂ ಇತರ ವಿಷಯಗಳಲ್ಲಿ ವಿರಕ್ತಿ ಮತ್ತು ಪರಮಾತ್ಮನ ದಿವ್ಯಜ್ಞಾನ ಎಂಬ ಪುಷ್ಪಪುಂಜಗಳು ಯಾವಾಗಲೂ ಅರಳಿರುತ್ತವ. ಇಂಥ ಗುರು ರಾಘವೇಂದ್ರ ಸ್ವಾಮಿಗಳನ್ನು ನಾನು ಶರಣು ಹೊಂದುತ್ತೇನೆ.

ವಿದ್ವಚ್ಚಕೋ ರೋತ್ಸವ-ಕಾರಿ-ಚಂದ್ರಂ
ಕರ್ಮಂದಿ-ವೃಂದಾರಕ-ವಂದಿತೇಂದ್ರಮ್॥
ನಿರ್ದೋಷ-ರಂಧ್ರಂ ಸು-ಗುಣೈಕ-ಸಾಂದ್ರಂ
ಶ್ರೀ-ರಾಘವೇಂದ್ರಂ ಪ್ರಣಮಾಮ್ಯತಂದ್ರಮ್॥೧೭॥

ವಿದ್ವಾಂಸರು ಎಂಬ ಚಕೋರಗಳಿಗೆ ರಾಘವೇಂದ್ರರು ಚಂದ್ರನಂತೆ ಉತ್ಸವವನ್ನು ಉಂಟು ಮಾಡುತ್ತಾರೆ. ಸನ್ಯಾಸಿಗಳೆಂಬ ದೇವತೆಗಳಿಗೆ ದೇವೇಂದ್ರನಂತೆ ವಂದನೀಯರಾಗಿದ್ದಾರೆ. ರಾಘವೇಂದ್ರರಲ್ಲಿ ಯಾವದೇ ದೋಷರೂಪವಾದ ರಂಧ್ರಗಳು ಇರುವದಿಲ್ಲ, ಶ್ರೇಷ್ಠವಾದ ಸದ್ಗುಣಗಳಿಂದ ಅವರು ಸಂದಟಿತರಾಗಿದ್ದಾರೆ. ಭಗವಂತನ ಭಜನೋಪಾಸನೆಯಲ್ಲಿ ಅವರು ನಿತ್ಯ ಜಾಗರೂಕರು. ಇಂಥ ಶ್ರೀ ರಾಘವೇಂದ್ರ ಗುರುಗಳನ್ನು ಆಲಸ್ಯವಿಲ್ಲದೇ ನಾನು ಬೇಗನೇ ನಮಸ್ಕರಿಸುತ್ತೇನೆ.

ದೇವಾನಾಂ ನಿವಹೇ ನಿರೀಕ್ಷ್ಯ ಹಿ ಮಯಾ ಸಮ್ಯಕ್ ಪರೀಕ್ಷ್ಯಾಽಶ್ರಿತೋ
ಭಕ್ತ್ಯಾ ಕಿಂ ಚ ವೃತಸ್ತುತೋಽರ್ಚಿತ-ನುತಃ ಶ್ರೀ-ರಾಘವೇಂದ್ರೋ ಹರಿಃ॥
ಪಶ್ಚಾಚ್ಛ್ರೀಗುರು-ಮಂಡಲೇಽಪಿ ಚ ಬಹು-ಶ್ರಾಂತ್ಯಾ ವಿಚಿಂತ್ಯಾಽಸಕೃತ್
ಮಾಧ್ವಾಧ್ವರ್ಯು-ಧುರೋದ್ಧರೋ ಯತಿ-ಪತಿಃ
ಶ್ರೀರಾಘವೇಂದ್ರೋ ವೃತಃ॥೧೮॥

ನಾನು ದೇವತೆಗಳ ಗುಂಪಿನಲ್ಲಿ ನೋಡಿ ಚೆನ್ನಾಗಿ ಪರೀಕ್ಷೆ ಮಾಡಿ ರಘುಕುಲದಲ್ಲಿ ಶ್ರೇಷ್ಠನಾಗಿರುವ ರಾಘವೇಂದ್ರ ಎಂಬ ಹೆಸರಿನ ರಾಮ ರೂಪಿ ಹರಿಯನ್ನು ಭಕ್ತಿಯಿಂದ ಆರಿಸಿಕೊಂಡೆನು ಮತ್ತು ಅವನನ್ನು ಪರಿಪರಿಯಿಂದ ಪೂಜಿಸಿದೆನು ಹಾಗೂ ಸ್ತೋತ್ರ ಮಾಡಿದೆನು. ಅನಂತರ ಗುರು ವರ್ಗದಲ್ಲಿ ನಾನು ನಿರೀಕ್ಷೆ ಪರೀಕ್ಷೆಗಳನ್ನು ಮಾಡಿದೆನು. ಬಹು ಕಷ್ಟಪಟ್ಟು ಅನೇಕ ಸಲ ಆಲೋಚನೆಯನ್ನು ಮಾಡಿ ಮಧ್ವ ಸಮಾಜದ ಉದ್ಧಾರದ ಹೊಣೆಯನ್ನು ಹೊತ್ತು ನಿಂತ ಶ್ರೀ ರಾಘವೇಂದ್ರ ಸ್ವಾಮಿಗಳನ್ನೇ ಯತಿಪತಿಗಳೂ ಮತ್ತು ಗುರೂತ್ತಮರೂ ಎಂದು ಆರಿಸಿಕೊಂಡು ಭಜಿಸುತ್ತೇನೆ.

ನಿಯತೇಂದ್ರಿಯ-ಚೇತಸ್ಕಾದ್
ನಿಯತಾದ್ ಭವತೋ ಗುರೋಃ॥
ನ ಯತೇಽನ್ಯಯತೇರ್ಗಂತುಂ
ನಯತೋ ಮುಕ್ತಿಮಾಶ್ರಯಮ್॥೧೯॥

ಇಂದ್ರಿಯಗಳನ್ನು ಮನಸ್ಸನ್ನು ನೇಮನ ಮಾಡಿಕೊಂಡು ವಶದಲ್ಲಿ ಇರಿಸಿಕೊಂಡ ಗುರುಗಳೇ ನೀವು ನನಗೆ ನಿಯತ ಗುರುಗಳು. ಬೇರೆ ಯತಿಗಳನ್ನು ಆಶ್ರಯಿಸಲು ನಾನು ಪ್ರಯತ್ನಿಸುವುದೇ ಇಲ್ಲ, ಯಾಕೆಂದರೆ ಮುಕ್ತಿಗೆ ನಮ್ಮನ್ನು ಕೊಂಡೊಯ್ಯಲು ಸಮರ್ಥರಾದ ಗುರುಗಳು ನೀವೊಬ್ಬರೇ ಮಾತ್ರ.

ಗುರೂಣಾಂ ಚ ತರೂಣಾಂ ಚ
ನ ಸಂಖ್ಯಾ ಭೂತಲೇ ಪರಮ್॥

ಗುರುತ್ವಂ ಸ್ವಸ್ತರುತ್ವಂ ಚ
ಮಿಲಿತ್ವೈಕ್ಯಂ ಗತಂ ತ್ವಯಿ॥೨೦॥

ಈ ಭೂಲೋಕದಲ್ಲಿ ಗುರುಗಳಿಗೂ ಲೆಕ್ಕವಿಲ್ಲ, ತರುಗಳಿಗೂ ಎಂದರೆ ಗಿಡಗಳಿಗೂ ಲೆಕ್ಕವಿಲ್ಲ. ಆದರೆ ಗುರುತ್ವ ಮತ್ತು ಸ್ವರ್ಗ ತರುತ್ವ ಎರಡೂ ನಿಮ್ಮಲ್ಲಿ ಮಾತ್ರ ಕೂಡಿ ಮಿಲಿತವಾಗಿ ಐಕ್ಯವನ್ನು ಹೊಂದಿರುತ್ತವೆ ಅರ್ಥಾತ್ ನೀವು ಗುರುಗಳೂ ಆಗಿದ್ದೀರಿ ಸ್ವರ್ಗ ಲೋಕದ ತರುವಾದ ಕಲ್ಪವೃಕ್ಷವೂ ಆಗಿದ್ದೀರಿ.

ಆಶಾಂ ವೈಷಯಿಕೀಂ ವ್ಯುದಸ್ಯ ವನಿತಾ-ಭೂ-ಸ್ನೇಹ-ಪಾಶಾನ್ ಗುರೂ-
ರಾಶಾ-ವ್ಯಾಪ್ತ-ಯಶಾಃ ಶಶೀವ-ಚ-ವಶೀ ಶ್ರೀಶಾರ್ಚನೈಕ-ವ್ರತಃ॥
ಕೀಶೋರ್ವೀಶ-ಯತೀಶ-ರೂಪ-ಮರುತೋ ದಾಸೋಽಹಮೇವಂ ವದನ್
ಆಶೀರ್ಭಿಃ ಶಮಯೇನ್ಮಮೇಷಣ-ಗಣಾಖ್ಯಾಽಶೀವಿಷೋತ್ಪೇಷಣಮ್॥೨೧॥

ರಾಘವೇಂದ್ರ ಸ್ವಾಮಿಗಳು ಮಡದಿ, ಭೂಮಿ ಇವುಗಳ ಸ್ನೇಹ ಪಾಶಗಳನ್ನು ಹರಿದು ಹಾಕಿದ್ದಾರೆ. ವಿಷಯಗಳ ಆಶೆಯನ್ನೇ ತೊರೆದಿದ್ದಾರೆ. ಇವುಗಳ ಆಶೆಯನ್ನು ಬಿಟ್ಟ ಇವರು ಚಂದ್ರನಂತೆ ಆಶಾವ್ಯಾಪ್ತ ಯಶಸ್ಸು ಉಳ್ಳವರಾಗಿದ್ದಾರೆ. ಇಲ್ಲಿ ಆಶಾ ಎಂದರೆ ದಿಕ್ಕು ಎಂದು ಅರ್ಥ. ದಿಗಂತ ವಿಶ್ರಾಂತ ಕೀರ್ತಿಗಳು ಆಗಿರುತ್ತಾರೆ ಎಂದು ಭಾವ. ಮನಸ್ಸು ಮತ್ತು ಇಂದ್ರಿಯಗಳನ್ನು ತಮ್ಮ ವಶದಲ್ಲಿ ಇರಿಸಿಕೊಂಡ ಇವರು ಶ್ರೀಶನಾದ ಲಕ್ಷ್ಮೀಪತಿ ನಾರಾಯಣನ ಪೂಜೆಯನ್ನು ವ್ರತ ಎಂದು ಮಾಡುತ್ತಲಿದ್ದಾರೆ. ಕೀಶ ಎಂದರೆ ಕಪಿರೂಪನಾದ ಹನುಮಂತ ದೇವರು. ಉರ್ವೀಶ ಎಂದರೆ ಭೀಮಸೇನದೇವರು. ಯತೀಶ ಎಂದರೆ ಮಧ್ವಾಚಾರ್ಯರು. ಈ ಮೂರು ರೂಪದ ವಾಯುದೇವರಿಗೆ ದಾಸರಾದ ಶ್ರೀ ರಾಘವೇಂದ್ರ ಸ್ವಾಮಿಗಳೇ ದಾರೇಷಣ, ಪುತ್ರೇಷಣ, ವಿತ್ತೇಷಣ (ಮಡದಿ ಮಕ್ಕಳು ಹಾಗೂ ದ್ರವ್ಯದ ಅಪೇಕ್ಷೆ) ಎನ್ನುವ ಈಷಣ ತ್ರಯವು ಒಂದು ಸರ್ಪದಂತೆ ನಮ್ಮನ್ನು ಕಾಡುತ್ತದೆ ಅದರ ಬಾಧೆಯನ್ನು ತಮ್ಮ ಆಶೀರ್ವಾದ ಬಲದಿಂದ, ಗುರುಗಳೇ, ಉಪಶಮನ ಮಾಡಿರಿ.

ಲೋಕೇ ಪಾವನ-ಗುರ್ವನುಗ್ರಹ-ಬಲಾದ್ ಭೂ-ಪಾವನಂ ಜೀವನಂ
ಶ್ರೀ-ವ್ಯಾಸಾರ್ಯ-ಜಯಾರ್ಯ-ವಾದಿ-ಗುರುರಾಜಾನಾಂಜಗತ್ಯಾಂಶ್ರುತಮ್॥
ತೇಷಾಮಂತಿಕಮೇವ ಗಂತು ಮಧುನಾ ಸ್ವಾಂತಂ ನಿತಾಂತಂ ಭಯ-
ಭ್ರಾಂತಂ ತದ್ ಗುರು-ರಾಘವೇಂದ್ರ-ಕರುಣಾಽಕೂಪಾರಮೇವಾಶ್ರಯೇ॥೨೨॥

ಈ ಲೋಕದಲ್ಲಿ ಶ್ರೀ ವ್ಯಾಸರಾಜರು, ಜಯತೀರ್ಥರು , ವಾದಿರಾಜ ಗುರುರಾಜರು ಈ ನಾಲ್ವರು ವಾಯು ದೇವರ ವಿಶೇಷವಾದ ಅನುಗ್ರಹ ಬಲದಿಂದ ಭೂಮಂಡಲದಲ್ಲಿ ಪರಮಪವಿತ್ರರಾದ ಪಾವನ ಜೀವನರು ಎಂದು ಸಿದ್ಧರಾಗಿದ್ದಾರೆ. ಆದರೆ ಅವರ ಬಳಿಗೆ ಹೋಗಲು ನನ್ನ ಹೃದಯವು ಹೆದರಿ ಅತ್ಯಂತ ಭಯ-ಭ್ರಾಂತವಾಗಿರುತ್ತದೆ. ಆದುದರಿಂದ ಕರುಣಾ ಸಮುದ್ರರಾದ ಗುರುರಾಘವೇಂದ್ರ ಸ್ವಾಮಿಗಳನ್ನೇ ನಾನು ಆಶ್ರಯಿಸುತ್ತೇನೆ.

ಪ್ರಾಗಾಚೀರ್ಣಮಜೀರ್ಣ-ಶೀರ್ಣ-ದುರಿತಂ ತೂರ್ಣಂ ಹಿ ಯತ್ ಚೂರ್ಣಯೇತ್
ಕಾಮ-ಕ್ರೋಧ-ಮದಾದಿ-ಪಾವಕ-ಖರ-ಜ್ವಾಲಾಶ್ಚ ಯಚ್ಛಾಮಯೇತ್
ಚೇತೋ-ಲಗ್ನ-ಕು-ವಾಸನಾ-ಪಟಮಪಿ ಛಿನ್ನಂ ವಿದಧ್ಯಾತ್ಸ್ವನಃ
ಪ್ರಾಶ್ನೀಹಿ ಪ್ರಿಯ-ರಾಘವೇಂದ್ರ-ಯಮಿನಾಂ ಪಾದೋದಕಂ ಪಾವನಮ್॥೨೩॥

ರಾಘವೇಂದ್ರ ಸ್ವಾಮಿಗಳ ಪಾದೋದಕವು ಮಾನವರು ಹಿಂದೆ ಮಾಡಿದ ಎಂದಿಗೂ ಸವೆಯದೇ ಇರುವ ಮಹಾಪಾಪವನ್ನು ಬೇಗನೆ ನಾಶಗೊಳಿಸುತ್ತದೆ. ಕಾಮ, ಕ್ರೋಧ, ಮದ ಮೊದಲಾದ ಅಗ್ನಿಯ ಪ್ರಖರ ಜ್ವಾಲೆಗಳನ್ನು ಶಾಂತಗೊಳಿಸುತ್ತದೆ ಹಾಗೂ ಮನಸ್ಸಿಗೆ ಅಂಟಿದ ದುರ್ವಾಸನೆ ಎಂಬ ಅರಿವೆಯನ್ನು ಹರಿದು ಹಾಕುತ್ತದೆ. ಆದುದರಿಂದ ಸರ್ವರಿಗೂ ಪ್ರಿಯರಾದ ರಾಘವೇಂದ್ರ ಸ್ವಾಮಿಗಳು ಎಂಬ ಸಂಯಮಿ ಶ್ರೇಷ್ಠರ ಪರಮ ಪವಿತ್ರವಾದ ಪಾದೋದಕವನ್ನು ಪ್ರಾಶನ ಮಾಡು.

ಯತ್ಪಾದೋದಕ-ಸೇವನಾತ್ ಕಲಿಯುಗೇ ಸರ್ವಾವನಾತ್ ಪಾವನಾದ್
ರೋಗಾ ಭೋಗ ಭಯಾನಕಾಃ ಕ್ವ ನು ಗತಾ ವೇಗಾನ್ನ ತಲ್ಲಕ್ಷ್ಯತೇ॥
ವ್ಯರ್ಥಂ ವೈದ್ಯಕ-ಶಾಸ್ತ್ರಮೇತದುಭಯಂ ಪಾಶ್ಚಾತ್ಯ-ಪೌರಸ್ತ್ಯಕಂ
ಸೋಽಯಂ ಶ್ರೀಗುರು-ರಾಘವೇಂದ್ರ-ಯತಿರಾಟ್ ಪಾಯಾದಪಾಯಾತ್ಸದಾ॥೨೪॥

ರಾಯರ ಪಾದೋದಕವು ಸರ್ವರನ್ನೂ ರಕ್ಷಿಸುತ್ತದೆ ಮತ್ತು ಈ ಕಲಿಯುಗದಲ್ಲಿ ಅವರ ಪಾದೋದಕದ ಸೇವೆಯಿಂದ ಭೋಗ-ಭಯಾನಕವಾದ ರೋಗಗಳು ವೇಗದಿಂದ ಎಲ್ಲಿಯೋಹೋಗಿಬಿಡುತ್ತವೆ. ಪಾದೋದಕದಿಂದ ಸುಲಭವಾಗಿ ರೋಗ ಪರಿಹಾರವಾಗಿ ಹೋಗುವುದರಿಂದ ಪಾಶ್ಚಾತ್ಯ ಹಾಗೂ ಪೌರಸ್ತ್ಯ ವೈದ್ಯ ಶಾಸ್ತ್ರವು ವ್ಯರ್ಥ ಎನಿಸಿ ಬಿಡುತ್ತದೆ. ಅಂಥ ಗುರುರಾಘವೇಂದ್ರ ಎಂಬ ಯತಿರಾಜರು ನಮ್ಮನ್ನು ಅಪಾಯದಿಂದ ಸದಾ ರಕ್ಷಣೆ ಮಾಡಲಿ.

ನಷ್ಟ-ಪ್ರಾಯಮಪೀಹ ದುಷ್ಟ-ಕಲಿನೈವಾಸ್ತಿಕ್ಯ ಮುಜ್ಜೀವಯನ್
ನಾಸ್ತಿಕ್ಯಂ ತಿರಯಂಶ್ಚ ದೈವತ-ಗುರು-ದ್ವೇಷಂ ಚ ನಿಶ್ಶೇಷಯನ್॥
ಶುಷ್ಕಂ ಪುಷ್ಕಲ-ಹೂಣ-ತುಷ್ಕರ-ಮತ್ಯೈ ಸಂಪರ್ಕತೋ ಭಕ್ತಿಸತ್-
ಕೇದಾರಂ ಕೃತಿ-ಸದ್ರಸೈಃ ಕಿಸಲಯನ್ ಯಚ್ಛೇದ್ ಗುರುಃ ಸತ್ಫಲಮ್॥೨೫॥

ಶ್ರೀ ರಾಘವೇಂದ್ರ ಗುರುಗಳು ದುಷ್ಟನಾದ ಕಲಿಯಿಂದ ಆಸ್ತಿಕತೆಯು ಪ್ರಾಯಃ ನಷ್ಟವಾಗಿ ಹೋಗಿ ನಾಸ್ತಿಕ್ಯವೇ ಎಲ್ಲೆಡೆ ಬೆಳೆದಿದೆ. ಆ ನಾಸ್ತಿಕ್ಯವನ್ನು ದೂರೀಕರಿಸಿ ಜನರಲ್ಲಿ ಆಸ್ತಿಕ ಭಾವನೆಯನ್ನು ಗುರುಗಳು ಪುನರುಜ್ಜೀವನಗೊಳಿಸುತ್ತಾರೆ. ಜನರಲ್ಲಿ ಇರುವ ದೇವತಾ ದ್ವೇಷ ಮತ್ತು ಗುರು ದ್ವೇಷಗಳನ್ನು ಸಂಪೂರ್ಣವಾಗಿ ತೊಡೆದು ಹಾಕುತ್ತಾರೆ. ಮ್ಲೇಂಛ, ಯವನ ಮೊದಲಾದ ಜನರ ವಿಶೇಷ ಸಂಪರ್ಕದಿಂದ ಒಣಗಿ ಹೋದ ಭಕ್ತಿ ಕ್ಷೇತ್ರವನ್ನು ತಮ್ಮ ಒಳ್ಳೊಳ್ಳೆಯ ಕೃತಿಗಳ ರಸದಿಂದ ಹಸಿರು-ಕುಸುರೊಡೆದು ನಿಲ್ಲುವಂತೆ ಮಾಡುತ್ತಾರೆ. ಇಂಥ ಗುರುಗಳು ನಮಗೆ ಒಳ್ಳೆಯ ಫಲವನ್ನು ನೀಡಲಿ.

ಲೋಕಾನಾಂ ಫಲಕೇಽಲಿಕೇ ಸತಿಲಕೇ ಯೇನಾಥವಾ ಮಸ್ತಕೇ
ಕಸ್ತೂರೀ-ಸದೃಶೀ ಪ್ರಭಾತಿ ಚ ಸತಿ ಧ್ವಸ್ತಾಸ್ಸಮಸ್ತಾಪದಃ॥

ಭೀತಾಃ ಕಿಂ ಚ ಸಮೀಪಮೇವ ಯಮರಾಡ್ ದೂತಾ ನ ಚೇ ಯುರ್ಗುರೋಃ
ಪತ್ಕಂಜೋದಿತ-ಪಾಪ-ಭಂಜಕ-ರಜಃ-ಕಿಂಜಲ್ಕ-ಪುಂಜಃ ಶ್ರಿಯೈ॥೧೬॥

ರಾಘವೇಂದ್ರ ಸ್ವಾಮಿಗಳ ಪಾದಾರವಿಂದದಿಂದ ಹೊಮ್ಮಿದ ಪರಾಗ ಪುಂಜವು ಜನರ ತಿಲಕವನ್ನು ಧರಿಸಿದ ಕಸ್ತೂರಿಯಂತಿರುವ ಕೂದಲುಳ್ಳ ತಲೆಯ ಮೇಲೆ ಹೊಳೆಯುತ್ತಿರಲು ಎಲ್ಲ ಆಪತ್ತುಗಳು ಧ್ವಂಸವಾಗಿ ಹೋಗುತ್ತವೆ ಮತ್ತು ಭಯ-ಭೀತರಾದ ಯಮದೂತರು ಆ ಮನುಷ್ಯನ ಸಮೀಪವೂ ಕೂಡ ಹೋಗುವದಿಲ್ಲ, ಅಂಥ ಗುರುಗಳ ಪಾದ ಕಮಲದಿಂದ ಉದಿಸಿ ಬಂದ ಮತ್ತು ಪಾಪಗಳನ್ನೆಲ್ಲ ಪರಿಹಾರ ಮಾಡುವ ಪಾದ ಧೂಳಿಯ ಸಮೂಹವು ನಮಗೆ ಐಶ್ವರ್ಯವನ್ನು ಕೊಡಲಿ.

ಯಸ್ಯಾನುಗ್ರಹ ಲೇಶತೋಽತ್ರ ಭುವನೇಽಸಾಧ್ಯಂ ನ ವೈ ವಿದ್ಯತೇ
ವ್ಯಂಗಃ ಪಂಗುರಲಂ ವಿಲಂಘಿತುಮಪಿ ಸ್ಯಾತ್ತುಂಗ ಶೈಲಂ ಪಟುಃ॥
ಜಲ್ಪಾಕೋ ರಸ ಪಾಕ ವಾಙ್ಮುಖರಿತೋ ಮೂಕೋಽಪಿ ಲೋಕೇ ಕವಿಃ
ತಂ ಶ್ರೀಮದ್ ಗುರುರಾಘವೇಂದ್ರ ಯಮಿನಂ ವಂದೇ ನರಂ ದೈವತಮ್॥೧೭॥

ಯಾರ ಅನುಗ್ರಹದ ಲವಲೇಶಕ್ಕೆ ಈ ಭೂಲೋಕದಲ್ಲಿ ಅಸಾಧ್ಯ ಎನ್ನುವದೇ ಇಲ್ಲವೋ ಮತ್ತು ಯಾರ ಅನುಗ್ರಹದಿಂದ ಅಂಗಹೀನನಾಗಿ ಕಾಲಿಲ್ಲದೆ ಕುಂಟುತ್ತಲಿರುವ ಮನುಷ್ಯನು ಅತ್ಯಂತ ಎತ್ತರವಾದ ಪರ್ವತ-ಶಿಖರವನ್ನು ದಾಟಿ ಹೋಗಲು ಸಮರ್ಥನಾಗುತ್ತಾನೋ ಹಾಗೂ ಮೂಕನೂ ಕೂಡ ಈ ಭೂಲೋಕದಲ್ಲಿ ಯಾರ ಅನುಗ್ರಹದಿಂದ ಮಹಾಕವಿಯಾಗಿ ರಸಮಯವಾದ ಮಾತುಗಳಿಂದ ಒಳ್ಳೆಯ ವಾಙ್ಮಿಯಾಗುತ್ತಾನೋ ಅಂಥ ರಾಘವೇಂದ್ರ ಸ್ವಾಮಿಗಳನ್ನು ನಾನು ಮನುಷ್ಯ ರೂಪದ ದೇವರು ಎಂದೇ ನಮಸ್ಕಾರ ಮಾಡುತ್ತೇನೆ.

ತಾಪಂ ಲೋಪಯತೇ, ಶುಚಂ ಕ್ಷಪಯತೇ, ಪಾಪಂ ಹರತ್ಯಾಶು ಯಾ
ದ್ರಾಗ್ ದೂರೀಕುರುತೇ ಚ ದುರ್ಮತಿಮಥೋ ತಂದ್ರಾಂ ಕರೋತಿ ದ್ರುತಾಮ್॥
ಕ್ಲೇಶಂ ನಾಶಯತೇಽಲಿಕೇಽನ್ಯಥಯತೇ ದುರ್ವರ್ಣಮಾಲಾಂ ವಿಧೇಃ
ಗು-ರ್ವಂಘ್ರ್ಯ-ಯಂಬುಜ ಮೃತ್ತಿಕಾ ಮಮ ಶಿರಃ ಖೇ ಕೃತ್ತಿಕಾ ಸ್ಯಾತ್ಸದಾ॥೧೮॥

ರಾಘವೇಂದ್ರ ಗುರುಗಳ ಪಾದ ಕಮಲದ ಮೃತ್ತಿಕೆಯು ಜನರ ತಾಪವನ್ನು ಲೋಪಗೊಳಿಸುತ್ತದೆ, ಶೋಕವನ್ನು ನಾಶಗೊಳಿಸುತ್ತದೆ, ಪಾಪವನ್ನು ಪರಿಹರಿಸುತ್ತದೆ, ದುರ್ಬುದ್ಧಿಯನ್ನು ಬೇಗನೆ ನಿವಾರಿಸುತ್ತದೆ, ಆಲಸ್ಯವನ್ನು ಓಡಿಸುತ್ತದೆ, ಕಷ್ಟ-ಕೋಟಲೆಗಳನ್ನು ಹೋಗಲಾಡಿಸುತ್ತದೆ, ಹಣೆಯಲ್ಲಿ ಬ್ರಹ್ಮನು ಬರೆದ ದುಃಖ ದುಮ್ಮಾನಗಳ ದುರ್ವರ್ಣಗಳನ್ನು ಬದಲಿಸುತ್ತದೆ. ಇಂಥ ಗುರುಗಳ ಮೃತ್ತಿಕೆಯು ನನ್ನ ತಲೆಯ ಮೇಲೆ ಕೃತ್ತಿಕಾ ನಕ್ಷತ್ರದಂತೆ ಬೆಳಗುತ್ತಾ ಇರಲಿ.

ಭಾಲಾಖ್ಯೇ ಫಲಕೇ ನೃಣಾಂ ತನುತರೇ ಮಸ್ತೇ ಪ್ರಶಸ್ತೇಽಥವಾ
ಯತ್ಸಂಧಾರಣತಃ ಪಲಾಯನ-ಪರಾ ಭೂತಾಃ ಪ್ರಭೂತಾ ಅಪಿ॥
ಭೀತಾ ದೂರತ ಏವ ದುರ್ಗ್ರಹ-ಗಣಾ ಬಾಧಾ ಭಿಯಾ ಧಾವಿತಾ
ಭೂಯಾಸುರ್ಮಮ ಭೂಯಸೇ ಗುರುಪದ-ಶ್ರೀಪಾಂಸವಃ ಶ್ರೇಯಸೇ॥೧೯॥

ಗುರುರಾಘವೇಂದ್ರ ಸ್ವಾಮಿಗಳ ಪಾದದ ಧೂಳಿನ ಕಣಗಳು ಮಾನವನ ಚಿಕ್ಕದಾದ ಹಣೆಯ ಫಲಕದಲ್ಲಿ ಅಥವಾ ಪ್ರಶಸ್ತವಾದ ತಲೆಯ ಮೇಲೆ ಧಾರಣ ಮಾಡಿದಲ್ಲಿ ಬಹಳಷ್ಟು ಭೂತ ಪಿಶಾಚಿಗಳು ಹೆದರಿ ದೂರ ಓಡಿ ಹೋಗುತ್ತವೆ. ಅದರಂತೆ ಪಾಪಗ್ರಹಗಳು ಗುರುಗಳ ಅಡಿಯ ಹುಡಿಗೆ ಹೆದರಿ ದೂರ ಧಾವಿಸುತ್ತವೆ. ಇಂಥ ಗುರುಗಳ ಚರಣದ ಧೂಳಿಯ ಕಣಗಳು ನನಗೆ ಹೆಚ್ಚಿನ ಶ್ರೇಯಸ್ಸನ್ನು ಉಂಟು ಮಾಡಲಿ.

ವಿಪನ್ನಂ ವಿಷಣ್ಣಂ ಪ್ರಪನ್ನಂ ಪ್ರಸನ್ನೋ
ರುದಂತಂ ವದಂತಂ ವಿದಂತಂ ನ ಕಿಂಚಿತ್॥
ಲುಠಂತಂ ಶಠಂ ತಂ ಸ್ಫುಟಂ ತೇ ಪದಾಂತೇ
ಧರಾಽಽಶೂದ್ಧರಾಽಮುಂ ಹರಾಽಘಂ ಗುರೋ ಮೇ॥೨೦॥

ಗುರುರಾಘವೇಂದ್ರರೇ, ನಾನು ಸಂಸಾರದಲ್ಲಿ ವಿಪನ್ನನಾಗಿದ್ದಾನೆ ಅರ್ಥಾತ್ ಆಪದ್ಗ್ರಸ್ತನಾಗಿದ್ದೇನೆ. ಅದರಿಂದ ರೋದನ ಮಾಡುತ್ತಾ ನಿಮ್ಮನ್ನೇ ಶರಣು ಹೊಂದಿದ್ದೇನೆ. ನನಗೆ ಏನು ಮಾಡಬೇಕು ಎನ್ನುವುದೆ ತಿಳಿಯದಂತಾಗಿದೆ. ಮಾತನಾಡಲಿಕ್ಕೂ ಕೂಡ ಬಾರದಂತಾಗಿದೆ. ನಿಮ್ಮ ಪಾದದ ಬಳಿಯಲ್ಲಿ ಹೊರಳಾಡುತ್ತಿರುವ ದುಷ್ಟನಾದ ನನ್ನನ್ನು ನೀವು ಪ್ರಸನ್ನರಾಗಿ ಉದ್ಧಾರಮಾಡಿರಿ. ಕೈ ಹಿಡಿದು ಎತ್ತಿರಿ. ನನ್ನ ಪಾಪವನ್ನು ಪರಿಹರಿಸಿರಿ.

ಅನರ್ಥಾನ್ನಿಹಂತುಂ ಪುಮರ್ಥಾನ್ ಪ್ರದಾತುಂ
ನ ಯಂತ್ರಾಣಿ ಮಂತ್ರಾ ನ ತಂತ್ರಂ ಸ್ವತಂತ್ರಮ್॥
ನ ತೀರ್ಥಾದಿ-ಸಾರ್ಥಂ ಸಮರ್ಥಂ ತದರ್ಥೇ
ಸುತೀರ್ಥಂ ಯಥಾರ್ಥಂ ಗುರೋ ಪ್ರಾರ್ಥಯೇ ತ್ವಾಮ್॥೨೧॥

ಗುರುಗಳೇ ನನಗೆ ಆಗುವ ಅನರ್ಥಗಳನ್ನು ಪರಿಹರಿಸಲಿಕ್ಕೂ ಮೋಕ್ಷಾದಿ ಪುರುಷಾರ್ಥಗಳನ್ನು ನೆಡಲಿಕ್ಕೂ ಯಾವುದೇ ಯಂತ್ರಗಳಾಗಲೀ, ಮಂತ್ರಗಳಾಗಲೀ ಬೇರೆ ಯಾವುದೇ ತಂತ್ರಗಳಾಗಲೀ ಸ್ವತಂತ್ರವಾಗಿ ಸಮರ್ಥವಾಗಿಲ್ಲ, ಅದರಂತೆ ಯಾವುದೇ ತೀರ್ಥ ಕ್ಷೇತ್ರಾದಿಗಳ ಸಮೂಹವೂ ಕೂಡ ಈ ವಿಷಯದಲ್ಲಿ ಸಮರ್ಥವಾಗಿಲ್ಲ, ಇದಕ್ಕೆಲ್ಲ ಸಮರ್ಥವಾದ ಯಥಾರ್ಥ ತೀರ್ಥವೆಂದರೆ ಶ್ರೀ ರಾಘವೇಂದ್ರ ತೀರ್ಥರೇ. ಆದುದರಿಂದ ನಾನು ತಮ್ಮನ್ನೇ ಪ್ರಾರ್ಥಿಸುತ್ತೇನೆ.

ನೃಣಾಮನಲ್ಪ-ಸಂಕಲ್ಪ-
ಗೋಚರಾರ್ಥ-ಪ್ರದಾನತಃ॥
ಕಲ್ಪದ್ರು-ಕಲ್ಪಾನ್ ವಂದೇಽಹಂ
ರಾಘವೇಂದ್ರ-ಗುರೂತ್ತಮಾನ್॥೨೨॥

ಮನುಷ್ಯರ ವಿಪುಲವಾದ ಮನಸ್ಸಿನ ಬಯಕೆ ಹಾಗೂ ಮನೋರಥ ಇವುಗಳಿಗೆ ಗೋಚರವಾದ ಎಲ್ಲ ವಸ್ತು-ವಿಷಯಗಳನ್ನು ಕೊಡುವುದರಿಂದ ಭೂಲೋಕದ ಕಲ್ಪವೃಕ್ಷ ಎನಿಸಿದ ಹಾಗೂ ಗುರೂತ್ತಮರೂ ಆದ ಶ್ರೀ ರಾಘವೇಂದ್ರ ತೀರ್ಥರನ್ನು ವಂದಿಸುತ್ತೇನೆ.

ವ್ಯಂಗಾ ವ್ಯಾಧಿ-ಹತಾಃ ಕ್ಷೀಣಾಃ
ಯಸ್ಯಾಪಾಂಗಾವಲೋಕನಾತ್॥
ಮಂಗಲಾನ್ಯಾಪ್ನುವಂತೀಡೇ
ತುಂಗಾ-ತೀರಗ-ಯೋಗಿನಮ್॥೩೩॥

ಯಾರ ಕರುಣಾ ಕಟಾಕ್ಷದ ನಿರೀಕ್ಷಣೆಯಿಂದ ಅಂಗವಿಕಲರೂ ರೋಗಗ್ರಸ್ತರೂ ಕ್ಷೀಣತ್ರಾಣರೂ ಆದ ಜನರು ಆಧಿ-ವ್ಯಾಧಿಗಳಿಂದ ಮುಕ್ತರಾಗಿ ಮಂಗಳಾಂಗರೂ ಆಗಿ ಸುಖ ಸೌಭಾಗ್ಯಗಳನ್ನು ಹೊಂದುತ್ತಾರೆ. ಅಂಥ ತುಂಗಾತೀರದ ಯೋಗಿಗಳಾದ ಶ್ರೀರಾಘವೇಂದ್ರ ತೀರ್ಥರನ್ನು ಸ್ತೋತ್ರ ಮಾಡುತ್ತೇನೆ.

ಶ್ರೀರಾಘವೇಂದ್ರ-ಕರುಣಾ-ತರಣಿರ್ಭವಾಬ್ಧೌ
ಶ್ರೀರಾಘವೇಂದ್ರ-ಚರಣಂ ಶರಣಂ ಸದಾ ಮೇ॥
ಶ್ರೀರಾಘವೇಂದ್ರ-ಗುರುಣೈವ ಸನಾಥಿತೋಽಹಮ್
ಶ್ರೀರಾಘವೇಂದ್ರ-ಚರಣಾಭರಣಂ ಶಿರೋ ಮೇ॥೩೪॥

ಶ್ರೀ ರಾಘವೇಂದ್ರ ಸ್ವಾಮಿಗಳ ಕರುಣೆಯು ಸಂಸಾರವೆಂಬ ಸಮುದ್ರದಲ್ಲಿ ನೌಕೆಯಾಗಿ ಪಾರುಗಾಣಿಸುತ್ತದೆ. ಆದುದರಿಂದ ಶ್ರೀ ರಾಘವೇಂದ್ರ ತೀರ್ಥರ ಚರಣಗಳಿಗೆ ನಾನು ಯಾವಾಗಲೂ ಶರಣು ಹೋಗುತ್ತೇನೆ. ಶ್ರೀ ರಾಘವೇಂದ್ರ ತೀರ್ಥ ಗುರುಗಳಿಂದ ನಾನು ಸನಾಥನೂ ಆಗಿದ್ದೇನೆ. ಶ್ರೀ ರಾಘವೇಂದ್ರ ತೀರ್ಥರ ಚರಣವು ನಮ್ಮ ಶಿರಸ್ಸಿಗೆ ಆಭರಣವಾಗಿರಲಿ.

ನ ರಾಘವಂ ಗಂತು ಮಘಾದ್ರಿರೀಶೇ
ನ ಲಾಘವಾದಿಂದ್ರಮುಪೈ ತುಮೀಪ್ಸೇ
ತದ್ರಾಘವೇಂದ್ರಾಂಘ್ರಿ-ಯುಗಾಪ್ತ್ಯುಪಾಯಂ
ಶ್ರೀರಾಘವೇಂದ್ರಂ ಗುರುಮಾಶ್ರಿತೋಽಹಮ್॥೩೫॥

ರಘುವಂಶದಲ್ಲಿ ಹುಟ್ಟಿ ರಾಘವ ಎಂದು ಪ್ರಸಿದ್ಧನಾದ ಶ್ರೀ ರಾಮನ ಬಳಿಗೆ ಪಾಪದ ಪರ್ವತದಂತಿರುವ ನಾನು ಹೋಗಲು ಸಮರ್ಥನಲ್ಲ. ಆ ರಾಘವನಿಗಿಂತ ಕಡಿಮೆಯವನಾದ ಇಂದ್ರನ ಬಳಿಗೆ ಹೋಗಲು ನನಗೆ ಇಚ್ಛೆಯಿಲ್ಲ. ಆದುದರಿಂದ ರಾಘವನಾಗಿ ದೇವತಾ ಶ್ರೇಷ್ಠನಾದುದರಿಂದ ರಾಘವೇಂದ್ರ ಎಂದು ಹೆಸರಾದ ಆ ಶ್ರೀ ರಾಮಚಂದ್ರನ ಪಾದ ಯುಗಲವನ್ನು ಹೊಂದಲು ಇರುವ ಏಕೈಕ ಉಪಾಯವೆಂದರೆ ಈ ರಾಘವೇಂದ್ರ ಎಂಬ ಹೆಸರಿನ ಗುರುಗಳೇ ಎಂದು ನಾನು ಇವರನ್ನು ಆಶ್ರಯಿಸಿದ್ದೇನೆ.

(ಕವಿಃ- ಮಹಾಮಹೋಪಾಧ್ಯಾಯ ಪಂಢರಿನಾಥಾಚಾರ್ಯ ಗಲಗಲಿ ರಾಷ್ಟ್ರ ಪ್ರಶಸ್ತಿ- ರಾಜ್ಯ ಪ್ರಶಸ್ತಿ- ರಾಷ್ಟ್ರಪತಿ ಪುರಸ್ಕಾರ- ರಾಮಕೃಷ್ಣ ದಾಲ್ಮಿಯಾ ಪ್ರಶಸ್ತಿ-ವಿಶ್ವೇಶ ತೀರ್ಥ ಪ್ರಶಸ್ತಿ- ಧ್ಯಾನ ಪ್ರಮೋದ ಪ್ರಶಸ್ತಿ ವಿಜೇತರು.)

ಮಹಾಮಹೋಪಾಧ್ಯಾಯ ಪಂ। ಪಂಢರಿನಾಥಾಚಾರ್ಯ ಗಲಗಲಿ ವಿರಚಿತ ಶ್ರೀ ರಾಘವೇಂದ್ರ ಕರುಣಾ ಲಹರಿ ಎಂಬ ಅಖಂಡ ಕಾವ್ಯ ಸಮಾಪ್ತ.